## FEBRUARY 15, 2025

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- ವಿಕಸಿತ ಭಾರತ ಗುರಿ ಸಾಧನೆಗೆ, ಮಹಿಳೆಯರು ಕೈ ಜೋಡಿಸಬೇಕು – ರಾಷ್ಟ್ರಪತಿ ದ್ರೌಪದಿ ಮುರ್ಮು, ಕರೆ.
- ಧಾರವಾಡ, ಗೌರಿಬಿದನೂರು ಹಾಗೂ ಹಾರೋಹಳ್ಳಿಯಲ್ಲಿ, 'ಪರಿಸರ ಸ್ನೇಹಿ ಇಂಧನ ಕ್ಲಸ್ಟರ್' ಸ್ಥಾಪನೆಗೆ, ರಾಜ್ಯ ಸರ್ಕಾರದ ಚಿಂತನೆ.
- ಕೇಂದ್ರ ಪುರಸ್ಕೃತ, ನಕ್ಷಾ ಯೋಜನೆ; ಕೊಪ್ಪಳ ಜಿಲ್ಲೆಯ, ಭಾಗ್ಯನಗರ ಪಟ್ಟಣ ಪಂಚಾಯ್ತಿ ಆಯ್ಕೆ.
- ಶಿವಮೊಗ್ಗದ ಹೊನ್ನೇಸರದಲ್ಲಿ, ಇಂದು ಮತ್ತು ನಾಳೆ, ಚರಕ ಉತ್ಸವ ಹಾಗೂ ಕಾಯಕ ಪ್ರಶಸ್ತಿ ಪ್ರದಾನ.

<><><>

**ಈಗ ವಾರ್ತೆಗಳ ವಿವರ**

<><><>

ವಿಕಸಿತ ಭಾರತದ ಕನಸು, ನನಸಾಗಿಸಲು, ಮಹಿಳೆಯರು ನಿರ್ಭೀತರಾಗಿ, ಮಹತ್ವಾಕಾಂಕ್ಷೆ, ಮಹೋನ್ನತ ಗುರಿ ಮತ್ತು ಶಿಕ್ಷಣವಂತರಾಗಿ, ದೇಶಕ್ಕೆ ತಮ್ಮ ಕೊಡುಗೆ ಸಲ್ಲಿಸುವಂತೆ, ರಾಷ್ಟ್ರಪತಿ ದ್ರೌಪದಿ ಮುರ್ಮು ಕರೆ ನೀಡಿದ್ದಾರೆ. ಬೆಂಗಳೂರಿನ ಆರ್ಟ್ ಆಫ್ ಲಿವಿಂಗ್‌ನಲ್ಲಿ ಆಯೋಜಿಸಿದ್ದ, 10ನೇ ಅಂತಾರಾಷ್ಟ್ರೀಯ ಮಹಿಳಾ ಸಮ್ಮೇಳನದಲ್ಲಿ ಪಾಲ್ಗೊಂಡು, ವಿವಿಧ ಕ್ಷೇತ್ರಗಳ ಸಾಧಕರಿಗೆ 'ವಿಶಾಲಾಕ್ಷಿ ರತ್ನ ಪ್ರಶಸ್ತಿ' ಮತ್ತು 'ಆಚಾರ್ಯ ರತ್ನಾನಂದ ಪ್ರಶಸ್ತಿ' ಪ್ರದಾನ ಮಾಡಿ, ಅವರು ಮಾತನಾಡಿದರು. ಭಾರತ ಆಧ್ಯಾತ್ಮಿಕತೆಯ ಪಾವನ ನೆಲ. ಅದನ್ನು ಜಾಗ್ರತಗೊಳಿಸುವಲ್ಲಿ, ಆರ್ಟ್ ಆಫ್ ಲಿವಿಂಗ್ ಇಟ್ಟಿರುವ ಹೆಜ್ಜೆ ಪ್ರಶಂಸನೀಯ. ಮಹಿಳೆಯರ ಅಭಿವೃದ್ಧಿಗಾಗಿ, ಹಲವು ಯೋಜನೆಗಳನ್ನು ರೂಪಿಸುತ್ತಿರುವ ಸಂಸ್ಥೆಯ ಕಾರ್ಯ ಹೆಮ್ಮೆ ಪಡುವಂಥದ್ದು ಎಂದರು.

<><><>

ಶ್ರೀ ರವಿಶಂಕರ ಗುರೂಜಿ, ರಾಜ್ಯಪಾಲ ಥಾವರಚಂದ್ ಗೆಹ್ಲೋಟ್, ಕೇಂದ್ರ ಸಚಿವರಾದ ಅನ್ನಪೂರ್ಣಾದೇವಿ, ಶೋಭಾ ಕರಂದ್ಲಾಜೆ ಹಾಗೂ ಮೀನಾಕ್ಷಿ ಲೇಖಿ, ಸೇರಿದಂತೆ ಅನೇಕ ಗಣ್ಯರು ಪಾಲ್ಗೊಂಡಿದ್ದರು.

<><><>

ಕೊಡಗು ಜಿಲ್ಲೆಯಲ್ಲಿ, ಪರಿಶಿಷ್ಟ ಜಾತಿಯ ಅಲೆಮಾರಿಗಳ ಜನಸಂಖ್ಯೆ 9 ಸಾವಿರದ 66, ಪರಿಶಿಷ್ಟ ವರ್ಗದ ಅಲೆಮಾರಿಗಳ ಜನಸಂಖ್ಯೆ 32 ಸಾವಿರದ 702 ಹಾಗೂ ವನವಾಸಿ ಬುಡಕಟ್ಟುಗಳ ಜನಸಂಖ್ಯೆ 16 ಸಾವಿರದ 997 ರಷ್ಟಿದೆ ಎಂದು, ಅಲೆಮಾರಿ ಅಭಿವೃದ್ಧಿ ನಿಗಮದ ರಾಜ್ಯ ಅಧ್ಯಕ್ಷೆ ಜಿ.ಪಲ್ಲವಿ ತಿಳಿಸಿದ್ದಾರೆ. ಮಡಿಕೇರಿಯಲ್ಲಿ ಅವರು ಸುದ್ದಿಗೋಷ್ಠಿ ನಡೆಸಿದರು. ಅಲೆಮಾರಿ ಸಮುದಾಯಗಳಿಗೆ, ಸರ್ಕಾರದ ಸೌಲಭ್ಯ ತಲುಪಿಸಲು ನಿಗಮ, ಸಿದ್ಧತೆ ಮತ್ತು ಬದ್ಧತೆಯೊಂದಿಗೆ, ಕೆಲಸ ನಿರ್ವಹಿಸುತ್ತಿದೆ ಎಂದರು.

<><><>

ಕುಶಾಲನಗರ ಬಳಿಯ ವನವಾಸಿ ಗ್ರಾಮ ದಿಡ್ಡಳ್ಳಿ ಹಾಗೂ ದೊಡ್ಡ ಬೆಟ್ಟಗೇರಿಯಲ್ಲಿ ಸೋಲಿಗ ಹಾಡಿಗೆ, ಅವರು ಭೇಟಿ ನೀಡಿದರು.

<><><>

ವಿದ್ಯುತ್ ಮತ್ತು ಹೈಡ್ರೋಜನ್ ಚಾಲಿತ ವಾಹನ ತಯಾರಿಕೆಗಾಗಿ, ಪರಿಸರ ಸ್ನೇಹಿ ಇಂಧನ ಕ್ಲಸ್ಟರ್‌ಗಳನ್ನು, ಧಾರವಾಡ, ಗೌರಿಬಿದನೂರು ಹಾಗೂ ಹಾರೋಹಳ್ಳಿಯಲ್ಲಿ ಸ್ಥಾಪಿಸಲು, ರಾಜ್ಯ ಸರ್ಕಾರ ಯೋಜಿಸಿದೆ.

<><><>

ಕೈಗಾರಿಕಾ ಖಾತೆ ಸಚಿವ ಎಂ.ಬಿ. ಪಾಟೀಲ ಈ ಮಾಹಿತಿ ನೀಡಿದ್ದು, ಮುಂಬರುವ 5 ವರ್ಷಗಳಲ್ಲಿ, 50 ಸಾವಿರ ಕೋಟಿ ರೂಪಾಯಿ ಹೂಡಿಕೆ ಹಾಗೂ 1 ಲಕ್ಷ ಉದ್ಯೋಗಗಳನ್ನು ಸೃಷ್ಟಿಸುವ ಗುರಿ ಹೊಂದಲಾಗಿದೆ ಎಂದರು. ಬೆಂಗಳೂರಿನ ಅರಮನೆ ಮೈದಾನದ, ಹೂಡಿಕೆದಾರರ ಸಮಾವೇಶದ ಸಮಾರೋಪ ಸಮಾರಂಭದಲ್ಲಿ, ಅವರು ಮಾತನಾಡಿದರು.

<><><>

ಮುಂದಿನ ಐದು ವರ್ಷಗಳ ಅವಧಿಯ, ಪರಿಸರ ಸ್ನೇಹಿ ಸಾರಿಗೆ ನೀತಿಯನ್ನು ಇಂಧನ ಖಾತೆ ಸಚಿವ, ಕೆ.ಜೆ. ಜಾರ್ಜ್ ಬಿಡುಗಡೆ ಮಾಡಿದರು. ದೇಶದ ಇ.ವಿ. ವಲಯದಲ್ಲಿ ರಾಜ್ಯ 3ನೇ ಸ್ಥಾನದಲ್ಲಿದ್ದು, 2 ಲಕ್ಷ 50 ಸಾವಿರ ಇ.ವಿ.ಚಾಲಿತ ವಾಹನಗಳಿವೆ. ಇ.ವಿ. ವಲಯದ ಸಂಶೋಧನೆ ಹಾಗೂ ಅಭಿವೃದ್ಧಿಗೆ 25 ಸಾವಿರ ಕೋಟಿ ರೂಪಾಯಿ ಬಂಡವಾಳ ಹೂಡಿಕೆಯಾಗಲಿದೆ ಎಂದು, ಸಚಿವ ಜಾರ್ಜ್ ನುಡಿದರು.

<><><>

ಕೊಪ್ಪಳ ಜಿಲ್ಲೆ, ಬಂಕಾಪುರ ತೋಳಧಾಮದಲ್ಲಿ ಮತ್ತೊಂದು ತೋಳ ಐದು ಮರಿಗಳಿಗೆ ಜನ್ಮ ನೀಡಿದೆ. ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ಎಕ್ಸ್ ಮಾಧ್ಯಮದಲ್ಲಿ ಈ ವಿಷಯ ಪ್ರಕಟಿಸಿದ್ದು, ಸಂರಕ್ಷಿತ ತೋಳಧಾಮದಲ್ಲಿ, ಅಳಿವಿನಂಚಿನಲ್ಲಿರುವ ಬೂದು ತೋಳ ಇಂಡಿಯನ್ ಗ್ರೇ ಊಲ್ಫ್ ಸಂತತಿ 40 ರಿಂದ 45 ಕ್ಕೆ ಏರಿಕೆಯಾಗಿದೆ ಎಂದು ಪ್ರಕಟಿಸಿದ್ದಾರೆ. ಗಂಗಾವತಿ ಪ್ರಾದೇಶಿಕ ಅರಣ್ಯ ವಲಯ ವ್ಯಾಪ್ತಿಯ, 332 ಹೆಕ್ಟರ್ ಪ್ರದೇಶದಲ್ಲಿ, ಬಂಕಾಪುರ ತೋಳಧಾಮದ ಸಂರಕ್ಷಣೆಗೆ ಅರಣ್ಯ ಇಲಾಖೆ ಕಾಳಜಿ ವಹಿಸಿದೆ.

<><><>

ಕೇಂದ್ರ ಪುರಸ್ಕೃತ ನಕ್ಷಾ ಯೋಜನೆ ಪ್ರಾಯೋಗಿಕ ಅನುಷ್ಠಾನಕ್ಕೆ, ಕೊಪ್ಪಳ ಜಿಲ್ಲೆಯ, ಭಾಗ್ಯ ನಗರ ಪಟ್ಟಣ ಪಂಚಾಯ್ತಿ ಆಯ್ಕೆಯಾಗಿದೆ. ಭಾಗ್ಯ ನಗರ ಪಟ್ಟಣದ ಪ್ರತಿಯೊಂದು ಸ್ಥಿರಾಸ್ತಿಯ ಡಿಜಿಟಲಿಕರಣ, ನಕ್ಷೆ ತಯಾರಿಕೆ ಮತ್ತು ಆಸ್ತಿಯ ಚೆಕ್ ಬಂದಿ ಕಾರ್ಯ, ಮಾದರಿಯಾಗಿ ನಡೆದಿದೆ ಎಂದು, ಪಟ್ಟಣ ಪಂಚಾಯ್ತಿಯ ಮುಖ್ಯಾಧಿಕಾರಿ, ಸುರೇಶ ಬಬಲಾದಿ ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

ಸುರೇಶ ಬಬಲಾದಿ ಧ್ವನಿ 45 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ಶಿವಮೊಗ್ಗ ಜಿಲ್ಲೆ, ಸಾಗರ ತಾಲೂಕು ಹೊನ್ನೇಸರದಲ್ಲಿ, ಇಂದು ಮತ್ತು ನಾಳೆ ಚರಕ ಉತ್ಸವ ಹಾಗೂ ಕಾಯಕ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿತವಾಗಿದೆ. ಇಂದು ಸಂಜೆ 6:30ಕ್ಕೆ, ಚರಕ ಸಂಸ್ಥೆಯ ಶ್ರಮಜೀವಿ ಆಶ್ರಮದಲ್ಲಿ, ರಾಜ್ಯ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಅಪರ ಪೊಲೀಸ್ ಮಹಾನಿರ್ದೇಶಕ, ಅರುಣ ಚಕ್ರವರ್ತಿ ಉತ್ಸವವನ್ನು ಉದ್ಘಾಟಿಸಲಿದ್ದಾರೆ. ಹಿರಿಯ ಪತ್ರಕರ್ತ ಹೊನಕೆರೆ ನಂಜುಂಡೇಗೌಡ ಅಥಿತಿಯಾಗಿ, ಹೆಗ್ಗೋಡು ಗ್ರಾಮ ಪಂಚಾಯಿತಿ ಅಧ್ಯಕ್ಷ ಎಂ.ಎಸ್. ನಾಗರಾಜ್ ಹಾಗೂ ಚರಕದ ಅಧ್ಯಕ್ಷೆ ಮಹಾಲಕ್ಷ್ಮೀ ಪಾಲ್ಗೊಳ್ಳಲಿದ್ದಾರೆ.

<><><>

ವಯಕ್ತಿಕ ವಿಭಾಗದಲ್ಲಿ, ಕಾಯಕ ಪ್ರಶಸ್ತಿಗೆ ಭಾಜನರಾದ ಶ್ರಮಜೀವಿ ಅನಿತಾ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಅನಿತಾ ಧ್ವನಿ 39 ಸೆಕೆಂದುಗಳು

<><><>

ತಂಡದ ವಿಭಾಗದಲ್ಲಿ, ಕಾಯಕ ಪ್ರಶಸ್ತಿಗೆ ಭಾಜನರಾದ, ಶ್ರಮಜೀವಿಗಳ ಪರವಾಗಿ, ಎಂ. ದಿವ್ಯಾ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಎಂ. ದಿವ್ಯಾ ಧ್ವನಿ 20 ಸೆಕೆಂದುಗಳು

<><><>

ಜಮ್ಮು–ಕಾಶ್ಮೀರದ ಪುಲ್ವಾಮಾದಲ್ಲಿ, 40 ಸಿ.ಆರ್.ಪಿ.ಎಫ್. ಯೋಧರು ಹುತಾತ್ಮರಾದ ದಿನವನ್ನು, ಬಲಿದಾನ ದಿನವಾಗಿ ಆಚರಿಸಲಾಯಿತು. ಪ್ರಧಾನಮಂತ್ರಿ ನರೇಂದ್ರ ಮೋದಿ, ಎಕ್ಸ್ ಮಾಧ್ಯಮದಲ್ಲಿ ಶ್ರದ್ಧಾಂಜಲಿ ಸಲ್ಲಿಸಿದ್ದು, ದೇಶದ ವೀರ ಯೋಧರ ತ್ಯಾಗ ಮತ್ತು ಅಚಲ ಬದ್ಧತೆಯನ್ನು ಮುಂಬರುವ ಪೀಳಿಗೆಗಳು ಸದಾ ಸ್ಮರಿಸಲಿವೆ ಎಂದಿದ್ದಾರೆ.

<><><>

ಧಾರವಾಡದ ಗಜಾನನ ಮಹಾಲೆ ಕಲಾ ಪ್ರತಿಷ್ಠಾನ ನೀಡುವ, 'ಕಲಾ ಉಪಾಸಕ' ಪ್ರಶಸ್ತಿಗೆ, ತಬಲಾ ಪಟು ಶ್ರೀಧರ್ ಮಾಂಡ್ರೆ ಭಾಜನರಾಗಿದ್ದಾರೆ. ಖ್ಯಾತ ಪ್ರಸಾದನ ಕಲಾವಿದ, ಗಜಾನನ ಮಹಾಲೆಯವರ 93ನೇ ಜನ್ಮ ದಿನೋತ್ಸವವಾದ

ಇದೇ 18ರಂದು, ಪಂಡಿತ್ ಎಂ.ವೆಂಕಟೇಶಕುಮಾರ, ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಪ್ರತಿಷ್ಠಾನದ ಅಧ್ಯಕ್ಷ ಬಾಳಣ್ಣ ಶೀಗಿಹಳ್ಳಿ, ಅಧ್ಯಕ್ಷತೆ ವಹಿಸಲಿದ್ದಾರೆ.

<><><>

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ, 1 ಲಕ್ಷ 84 ಸಾವಿರ ಬೀದಿ ನಾಯಿಗಳಿಗೆ, ಐದು ಮಾರಕ ರೋಗಗಳನ್ನು ತಡೆಯುವ ಉದ್ದೇಶದಿಂದ, ಸಂಯುಕ್ತ ಲಸಿಕೆ ಹಾಕುವ ಗುರಿ ಇದೆ ಎಂದು, ಮುಖ್ಯ ಆಯುಕ್ತ ತುಷಾರ ಗಿರಿ ನಾಥ್ ತಿಳಿಸಿದ್ದಾರೆ. ಪಾಲಿಕೆ ಕೇಂದ್ರ ಕಚೇರಿ ಆವರಣದಲ್ಲಿ ಲಸಿಕೆ ಜಾಥಾಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು. ಇಡೀ ದೇಶದಲ್ಲಿಯೇ ಮೊದಲ ಬಾರಿಗೆ ಪಾಲಿಕೆ ವತಿಯಿಂದ, ಸಂಯುಕ್ತ ಲಸಿಕೆ ನೀಡಲಾಗುತ್ತಿದೆ. ಲಸಿಕೆ ಹಾಗೂ ಶೀಥಲೀಕರಣ ವ್ಯವಸ್ಥೆಗೆ, 4 ಕೋಟಿ 98 ಸಾವಿರ ರೂಪಾಯಿ ವ್ಯಯಿಸಲಾಗುತ್ತಿದೆ ಎಂದು, ಹೇಳಿದರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಇಂದು ರಾಜ್ಯಾದ್ಯಂತ, ಸಂತ ಸೇವಾಲಾಲರ ಜಯಂತ್ಯುತ್ಸವವನ್ನು, ಶ್ರದ್ಧಾ ಭಕ್ತಿಯಿಂದ ಆಚರಿಸಲಾಗುತ್ತಿದೆ.

<><><>

ವಿಜಯನಗರ ಜಿಲ್ಲೆ, ಹೂವಿನಹಡಗಲಿ ತಾಲೂಕು, ಡಂಕನಮರಡಿಯ ಮೈಲಾರಲಿಂಗೇಶ್ವರ ಜಾತ್ರಾ ಮಹೋತ್ಸವದಲ್ಲಿ, ಗೊರವಯ್ಯ ರಾಮಪ್ಪ, ಬಿಲ್ಲನ್ನೇರಿ, "ತುಂಬಿದ ಕೊಡ ತುಳುಕಿತೋ ಪರಾಕ್" ಎಂದು ಕಾರ್ಣಿಕ ನುಡಿದಿದ್ದಾರೆ.

<><><>

'ಬಾನುಲಿ ರೈತರ ದಿನ'ವನ್ನು ಇಂದು, ದೇಶಾದ್ಯಂತ ಆಚರಿಸಲಾಗುತ್ತಿದೆ. 'ಕಿಸಾನ್ ವಾಣಿ' ಕಾರ್ಯಕ್ರಮದ ಮೂಲಕ, ಕೃಷಿ ಯೋಜನೆಗಳ ಬಗ್ಗೆ ಮಾಹಿತಿ ಬಿತ್ತರಿಸಲು, ಆಕಾಶವಾಣಿ ವಿಶೇಷ ಕಾರ್ಯಕ್ರಮ ರೂಪಿಸಿದೆ.

<><><>

ಬೆಂಗಳೂರು ಆಕಾಶವಾಣಿಯ ಹಿರಿಯ ಉದ್ಘೋಷಕಿ, ಬಿ.ಕೆ. ಸುಮತಿ ಅವರು ಬರೆದ, 'ನುಡಿ ತೇರ ನೆಳೆದವರು – ಬಾನುಲಿ ಕಲಿಗಳು' ಪುಸ್ತಕ, ಇಂದು ಬೆಳಗ್ಗೆ 10 ಗಂಟೆಗೆ, ಬೆಂಗಳೂರಿನ ಗಾಂಧಿ ಭವನದಲ್ಲಿ, ಬಿಡುಗಡೆಯಾಗಲಿದೆ.

<><><>

ಕೇಂದ್ರದ ವಾರ್ತಾ ಮತ್ತು ಪ್ರಸಾರ ಹಾಗೂ ರೇಲ್ವೆ ಖಾತೆ ಸಚಿವ, ಅಶ್ವಿನಿ ವೈ ಷ್ಣವ್ ಇಂದು, ಬೆಂಗಳೂರು ವಲಯದ ರೇಲ್ವೆ ವ್ಯವಸ್ಥಾಪಕರ ಕಚೇರಿಯಲ್ಲಿ, ವಿಶೇಷ ಸಭೆ ನಡೆಸಲಿದ್ದಾರೆ.

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ, ಆಯವ್ಯಯ ಮಂಡನೆಗೆ ಸಂಬಂಧಿಸಿ, ವಿವಿಧ ಇಲಾಖೆಗಳ ಸಚಿವರೊಂದಿಗೆ, ಗೃಹ ಕಚೇರಿಯಲ್ಲಿ ಚರ್ಚೆ ನಡೆಸಿದರು.

<><><>

ರಾಷ್ಟ್ರೀಯ ರಸ್ತೆ ಸುರಕ್ಷತೆ ಜನ ಜಾಗೃತಿ ಮಾಸಿಕ, ಇಂದು ಸಮಾರೋಪಗೊಳ್ಳಲಿದೆ.

<><><>

**ಉಪ ಲೋಕಾಯುಕ್ತ ಬಿ. ವೀರಪ್ಪ ಅವರು, ಹಾವೇರಿ ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ, ದೂರುಗಳ ವಿಚಾರಣೆ ನಡೆಸಿದರು.**

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ವಿಕಸಿತ ಭಾರತ ಗುರಿ ಸಾಧನೆಗೆ, ಮಹಿಳೆಯರು ಕೈ ಜೋಡಿಸಬೇಕು – ರಾಷ್ಟ್ರಪತಿ ದ್ರೌಪದಿ ಮುರ್ಮು, ಕರೆ.**
- **ಧಾರವಾಡ, ಗೌರಿಬಿದನೂರು ಹಾಗೂ ಹಾರೋಹಳ್ಳಿಯಲ್ಲಿ, 'ಪರಿಸರ ಸ್ನೇಹಿ ಇಂಧನ ಕ್ಲಸ್ಟರ್' ಸ್ಥಾಪನೆಗೆ, ರಾಜ್ಯ ಸರ್ಕಾರದ ಚಿಂತನೆ.**
- **ಕೇಂದ್ರ ಪುರಸ್ಕೃತ, ನಕ್ಷಾ ಯೋಜನೆ; ಕೊಪ್ಪಳ ಜಿಲ್ಲೆಯ, ಭಾಗ್ಯನಗರ ಪಟ್ಟಣ ಪಂಚಾಯ್ತಿ ಆಯ್ಕೆ.**
- **ಶಿವಮೊಗ್ಗದ ಹೊನ್ನೇಸರದಲ್ಲಿ, ಇಂದು ಮತ್ತು ನಾಳೆ, ಚರಕ ಉತ್ಸವ ಹಾಗೂ ಕಾಯಕ ಪ್ರಶಸ್ತಿ ಪ್ರದಾನ.**

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>